ಎಲ್ಲಾ ಮನೆಗಳಿಗೂ ಕೊಟ್ಟಿದೆಯೆಂದು ವರದಿಯನ್ನು ಕೊಡುತ್ತೀರಿ, ಆದರೆ ಎಲ್ಲಾ ಕಡೆಗಳಲ್ಲೂ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಸೆನ್ಸಸ್‌ನಲ್ಲಿ ಬಂದಿರತಕ್ಕಂತಹ ರೆವಿನ್ಯೂ ವಿಲೇಜ್ ಗ್ರಾಮಗಳೇನಿವೆ ಅದಕ್ಕೆ ಕನೆಕ್ಷನ್ ಕೊಡುತ್ತೇವೆ, ಎಷ್ಟು ಮನೆಗಳಿಗೆ ಎಂದು ಅಲ್ಲ, ಆ ಗ್ರಾಮಕ್ಕೆ ಕನೆಕ್ಷನ್ ಕೊಟ್ಟಿರುತ್ತಾರೆ, ಅಲ್ಲಿ ಬೀದಿ ದೀಪಗಳನ್ನು ಹಾಕಿರುತ್ತಾರೆ ಅದು ಎಷ್ಟು ಮನೆಗಳವರು ವಿದ್ಯುಚ್ಛಕ್ತಿ ಕನೆಕ್ಷನ್ ತೆಗೆದುಕೊಳ್ಳುತ್ತಾರೆಂಬುದನ್ನು ಅವಲಂಬಿಸುವುದಿಲ್ಲ. ಯಾವುದಾದರೂ ಗ್ರಾಮಂಗಳಿಗೆ ಕೊಡದೇ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಕೊಡಗಿನಲ್ಲಿ ಪರಿಸ್ಥಿತಿ ಏನಿದೆಯೆಂದರೆ ಅಲ್ಲಿನ ಗ್ರಾಮಂಗಳಿಗೆ ರಸ್ತೆ ಇಲ್ಲ ಎರಡೂವರೆ ಕಿಲೋ ಮೀಟರ್‌ವರೆಗೆ ತೆಗೆದುಕೊಂಡು ಹೋಗಿ ಲೈಟ್ ಹಾಕಿ ಬಿಡುತ್ತೀರಿ ಆ ಗ್ರಾಮಂಗಳು ೧೦-೧೨ ಕಿಲೋಮೀಟರ್ ಒಳಗೆ ಹೋಗಿರುತ್ತದೆಇದರಿಂದಾಗಿ ಎಲ್ಲಾ ಕಡೆಗೂ ವಿದ್ಯುಚ್ಛಕ್ತಿ ಸಿಗುವುದಿಲ್ಲ. ಇದರ ವ್ಯವಸ್ಥೆಯನ್ನು ಬದಲಾವಣೆ ಮಾಡದಿದ್ದರೆ ಎಲ್ಲಾ ಕಡೆಗೂ ವಿದ್ಯುಚ್ಛಕ್ತಿಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಕೊಡಗಿನ ೨೯೧ ಗ್ರಾಮಗಳ ಪೈಕಿ ೨೮೬ ಗ್ರಾಮಂಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೇವೆ. ಇನ್ನು ಉಳಿದ ಐದರ ಪೈಕಿ ಒಂದು ಗ್ರಾಮಂಕ್ಕೆ ಸೋಲಾರ್ ಸಿಸ್ಟಮ್ ಅನ್ನು ಅಳವಡಿಸಬೇಕೆಂಬ ಪ್ರಯತ್ನ ನಡೆದಿದೆ ಇನ್ನು ನಾಲ್ಕು ಗ್ರಾಮಂಗಳು ಉಳಿದಿದೆ. ಯಾವ ಗ್ರಾಮಂಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ ಎಂಬ ಬಗ್ಗೆ ವಿವರಗಳನ್ನು ಕಳಿಸಿದರೆ ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಕಳಿಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಯ ಬಗ್ಗೆ

೬೪೬. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾಮಿರ್ಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಇರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ?

(ಆ) ಅವುಗಳಲ್ಲಿ ನಷ್ಟದಲ್ಲಿರುವ ಕಾರ್ಖಾನೆಗಳು ಎಷ್ಟು ?

(ಇ) ಅವುಗಳನ್ನು ಸಂಧಾರಿಸಲು ಸರ್ಕಾರದವರು ಕೈಗೊಂಡ ಕ್ರಮಂಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿ ಮತ್ತು ಪದ್ಯುಚ್ಛಕ್ತಿ ಸಚಿವರು).—

(ಅ) ೨೮

(ಆ) ೧೪ ಕಾರ್ಖಾನೆಗಳು ನಷ್ಟದಲ್ಲಿವೆ.
೫ ಕಾರ್ಖಾನೆಗಳು ಸಧ್ಯದಲ್ಲಿ ಕೆಲಸ ಮಾಡುತ್ತಿಲ್ಲ.

(ಇ) ಘಟಕಗಳು ರೋಗ್ಯಸ್ಥವಾಗಲು ಕಾರಣವಾಗಳನ್ನು ಪರಿಶೀಲಿಸಲು ಹಾಗೂ ರೋಗಗ್ರಸ್ಥ ಘಟಕಗಳನ್ನು ಪುನಶ್ಚೇತನಗೊಳಿಸಲು ಕೈಗೊಳ್ಳಬೇಕಾದ ಪರಿಹಾರ ಕ್ರಮಂಗಳ ಬಗ್ಗೆ ಸಲಹೆ ನೀಡಲು ಸರ್ಕಾರವು ಒಂದು ಸಮಿತಿಯನ್ನು ರಚಿಸಿದೆ.

ಶ್ರೀ ಶಿವಾನಂದ ಕೌಜಲಗಿ.—ನಷ್ಟದಲ್ಲಿರುವ ಕಾರ್ಖಾನೆಗಳು ೧೪ ಮತ್ತು ಐದು ಕಾರ್ಖಾನೆಗಳು ಕೆಲಸ ಮಾಡುತ್ತಿಲ್ಲವೆಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಅವುಗಳನ್ನು ಪ್ರಾರಂಭಿಸಲು ಯಾವ ಕ್ರಮ ಕೈಗೊಂಡಿದ್ದೀರಿ ಹಾಗೂ ನಷ್ಟದಲ್ಲಿರುವ ಕಾರ್ಖಾನೆಯ ಮೇಲೆ ಸರಕಾರ ಯಾವ ಕ್ರಮ ಕೈಗೊಂಡಿದೆಯೆಂಬುದನ್ನು ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ಒಟ್ಟು ೨೮ ಸಕ್ಕರೆ ಕಾರ್ಖಾನೆಗಳಿದ್ದು ಅವುಗಳ ಪೈಕಿ ೧೪ ನಷ್ಟದಲ್ಲಿವೆ ಹಾಗೂ ಐದು ಕಾರ್ಖಾನೆಗಳು ಕ್ಲೋಸ್ ಆಗಿದೆ. ೯ ಕಾರ್ಖಾನೆಗಳು ಲಾಭದಲ್ಲಿದೆ. ವಿವರವನ್ನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡುತ್ತೇನೆ.